ಈ) ಕೇಂದ್ರ ಸರ್ಕಾರದಿಂದ ಅರಣ್ಯ ಪ್ರದೇಶ ಬಿಡುಗಡೆಯಾದ ನಂತರ ಹಾಗೂ ಸಂಪನ್ಮೂಲ ವನ್ನು ಸರಿಪಡಿಸಿ ಕಾರ್ಯಾರಂಭ ಮಾಡಲಾಗುವುದು.

ಶ್ರೀ ಜಿ. ಎಸ್. ಆಚಾರ್ —ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಈ ವರಾಹಿ ಜಲ ವಿದ್ಯುತ್ ಯೋಜನೆಯಿಂದ ಖಾಯಂ ಆಗಿ ನೀರಾವರಿಗಾಗಿ ಬಳಸಲು ನೀರು ಸಿಗುವುದರಿಂದ ಈ ವರಾಹಿ ನೀರಾವರಿ ಯೋಜನೆ ಕೆಲಸ ಇಲ್ಲಿಯವರೆಗೆ ಮುಗಿಯದಿರಲು ಕಾರಣವೇನು? ಈ ಯೋಜನೆ ಸಲುವಾಗಿ ಇಲ್ಲಿಯವರೆಗೆ ೧೭೨ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ ಎಂದು ಇಲ್ಲಿ ಹೇಳಿದ್ದೀರಿ. ಆದರೆ ಈ ಹಣದ ಮುಕ್ಕಾಲು ಭಾಗ ಈ ಯೋಜನೆಯ ಸಮೀಕ್ಷೆಗಾಗಿ ಮತ್ತು ಸಿಬ್ಬಂದಿಗಾಗಿ ಹೋಗಿದೆ. ಆದಷ್ಟು ಜಾಗ್ರತೆ ಆಂದರೆ ಬರುವ ವರ್ಷ ಈ ಕೆಲಸವನ್ನು ಕೈಗೊಳ್ಳುತ್ತೇವೆಂದು ಕಳೆದ ವರ್ಷ ಇಲ್ಲಿ ಮಾನ್ಯ ನೀರಾವರಿ ಸಚಿವರು ಆಶ್ವಾಸನೆಯನ್ನು ಕೊಟ್ಟಿದ್ದರು. ಆದರೆ ಕೆಲಸ ಪ್ರಾರಂಭವಾಗಲಿಲ್ಲ. ಅಣೆಕಟ್ಟಿನ ಎತ್ತರವನ್ನು ಕಡಿಮೆ ಮಾಡಿದರೆ ಕಾದಿರಿಸಿದ ಅರಣ್ಯ ಪ್ರದೇಶಕ್ಕೆ ಹೆಚ್ಚು ತೊಂದರೆ ಬರುವುದಿಲ್ಲವೆಂದು, ಆದ್ದರಿಂದ ಈ ಕೆಲಸವನ್ನು ಯಾವ ತೊಂದರೆಯೂ ಇಲ್ಲದೆ ಪ್ರಾರಂಭ ಮಾಡಬಹುದೆಂದು ಮಾನ್ಯ ಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದರು. ಆದರೂ ಇದರ ಕೆಲಸ ಪ್ರಾರಂಭವಾಗದಿರಲು ಕಾರಣವೇನು ?

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಅಣೆಕಟ್ಟಿನ ಎತ್ತರವನ್ನು ಹತ್ತು ಅಡಿ ಕಡಿಮೆ ಮಾಡುವುದಕ್ಕೆ ನಿರ್ಣಯ ಕೈಕೊಂಡಿದ್ದೇವೆ. ಆದರೆ ಕೇಂದ್ರ ಸರ್ಕಾರ ಇದಕ್ಕೆ ಫಾರೆಸ್ಟ್ ಏರಿಯಾವನ್ನು ಬಿಡುಗಡೆ ಮಾಡಬೇಕಾಗಿರುತ್ತದೆ. ಆದಕ್ಕಾಗಿ ನಾವು ಅವರಿಗೆ ಪತ್ರ ಬರೆದಿದ್ದೇವೆ. ಅವರು ಒಪ್ಪಿಗೆ ಕೊಟ್ಟ ಕೂಡಲೇ ಕೆಲಸ ಪ್ರಾರಂಭ ಮಾಡುತ್ತೇವೆ.

ಶ್ರೀ ಜಿ. ಎಸ್. ಆಚಾರ್.—ಅಲ್ಲಿ ರಸ್ತೆಗಳು ಮತ್ತು ಕ್ವಾಸ್-ವೇ ಕೆಲಸಗಳು ಏನು ನಡೆಯುತ್ತಿವೆ, ಅವು ಸರ್ವಕಾಲಕ್ಕೂ ಎಲ್ಲಾ ಜನರಿಗೆ ಅನುಕೂಲವಾಗುವಂತೆ ಆಗುವುದು ಒಳ್ಳೆಯದು. ಆದರೆ ಅಲ್ಲಿ ಸ್ವಲ್ಪ ಮೇಲಿಂಗಡೆ ಒಂದು ಸೇತುವೆಯನ್ನು ಈ ಯೋಜನೆಯ ಕೆಲಸಕ್ಕೆ ಮಾತ್ರ ಅನುಕೂಲವಾಗುವಂತೆ ಕಟ್ಟುತ್ತಿದ್ದಾರೆ. ಇದಕ್ಕೆ ಬದಲು ಸ್ವಲ್ಪ ಕೆಳಭಾಗದಲ್ಲಿ ಕಟ್ಟಿದರೆ ಅಲ್ಲಿನ ಸಾರ್ವಜನಿಕರಿಗೂ ಇದರಿಂದ ಅನುಕೂಲವಾಗುತ್ತದೆ. ಆದ್ದರಿಂದ ರಸ್ತೆ ಮತ್ತು ಸೇತುವೆ ಕೆಲಸಗಳನ್ನು ಜನರಿಗೆ ಅನುಕೂಲವಾಗುವಂತೆ ಕಟ್ಟಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದನ್ನು ಪರಿಶೀಲನೆ ಮಾಡುತ್ತೇನೆ.

ಪುತ್ತೂರು ಬೈಪಾಸ್ ರಸ್ತೆಯ ಕಾಮಗಾರಿ

೨೫೩೭. ಶ್ರೀ ವಿನಯಕುಮಾರ್ ಸೊರಕೆ (ಪುತ್ತೂರು).—ಮಾನ್ಯ ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಪುತ್ತೂರು ಬೈಪಾಸ್ ರಸ್ತೆ ಅಗತ್ಯತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಬೈಪಾಸು ರಸ್ತೆಯ ಬಗ್ಗೆ ಸರ್ಕಾರದವರು ಕೈಗೊಂಡ ಕಾರ್ಯಕ್ರಮಗಳೇನು ?

ಇ) ಈ ಕಾಮಗಾರಿಯನ್ನು ಯಾವ ವರ್ಷದಲ್ಲಿ ಪೂರ್ತಿಗೊಳಿಸುವ ನಿರೀಕ್ಷೆ ಇದೆ ?

ಈ) ಈ ವರ್ಷ ಬೈಪಾಸು ರಸ್ತೆಗೆ ಆಯವ್ಯಯದಲ್ಲಿ ಒದಗಿಸಿರುವ ಹಣದ ಮೊತ್ತವೆಷ್ಟು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ಲೋಕೋಪಯೋಗಿ ಸಚಿವರು).—

ಅ) ಬಂದಿದೆ.

ಆ) ಬೈಪಾಸ್ ರಸ್ತೆಗೆ ಬೇಕಾದ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ೨೧ ಲಕ್ಷ ರೂ.ಗಳ ಅಂದಾಜಿಗೆ ಒಪ್ಪಿಗೆ ನೀಡಲಾಗಿದ್ದು ಭೂಸ್ವಾಧೀನ ಕೆಲಸವು ಪ್ರಗತಿಯಲ್ಲಿದೆ.

ಇ) ರಸ್ತೆಗೆ ಬೇಕಾದ ಭೂಮಿಯನ್ನು ಸರ್ಕಾರದ ಸ್ವಾಧೀನಕ್ಕೆ ಪಡೆದ ಮೇಲೆ, ಈ ಬೈಪಾಸ್ ರಸ್ತೆಯ ನಿರ್ಮಾಣದ ಕಾಮಗಾರಿಯನ್ನು ಹಣಕಾಸು ಲಭ್ಯತೆಗನುಗುಣವಾಗಿ ಕೈಗೊಳ್ಳಲಾಗುವುದು.

ಈ) ೮ ಲಕ್ಷ ರೂಪಾಯಿಗಳು (ಭೂಸ್ವಾಧೀನಕ್ಕೆ)

ಶ್ರೀ ವಿನಯ ಕುಮಾರ್ ಸೊರಕೆ.—ಮಾನ್ಯ ಅಧ್ಯಕ್ಷರೆ. ಪುತ್ತೂರು ಬೈಪಾಸ್ ರಸ್ತೆ ಅಗತ್ಯತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂಬ ಪ್ರಶ್ನೆ ಕೇಳಿದ್ದಕ್ಕೆ 'ಬಂದಿದೆ' ಎಂದು ಉತ್ತರ ಬಂದಿದೆ. ಈ ಬೈಪಾಸ್ ರಸ್ತೆ ಅಲ್ಲಿ ಬೇಕು ಎನ್ನುವ ಅಗತ್ಯತೆ ಇರುವುದು ಯಾವ ಇಸವಿಯಲ್ಲಿ ಸರ್ಕಾರದ ಗಮನಕ್ಕೆ ಬಂದಿತು. ಈ ಬೈಪಾಸ್ ರಸ್ತೆಗೆ ಬೇಕಾಗಿರತಕ್ಕಂಥ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲು ೨೧ ಲಕ್ಷ ರೂಪಾಯಿಗಳ ಅಂದಾಜಿಗೆ ಒಪ್ಪಿಗೆ ನೀಡಲಾಗಿದ್ದು ಭೂಸ್ವಾಧೀನ ಕೆಲಸವು ಪ್ರಗತಿಯಲ್ಲಿದೆ ಎಂದು ಉತ್ತರ ಕೊಟ್ಟಿದ್ದೀರಿ. ಈ ಭೂಸ್ವಾಧೀನ ಕೆಲಸವನ್ನು ಯಾವಾಗ ಪ್ರಾರಂಭಿಸಲಾಯಿತು. ಭೂಸ್ವಾಧೀನಕ್ಕೆ ಬೇಕಾದಂಥ ಮೊತ್ತ ೨೧ ಲಕ್ಷ ಅಲ್ಲ ಒಂದು ಕೋಟಿ ಚಿಲ್ಲರೆ ದುಡ್ಡು ಬೇಕೆ. ಒಂದು ವೇಳೆ ೧ ಕೋಟಿ, ೨೧ ಲಕ್ಷಕ್ಕಿಂತ ಜಾಸ್ತಿಯಾಗಿದ್ದರೆ ಆ ಮೊತ್ತವನ್ನು ಈ ವರ್ಷದಲ್ಲಿ ಸೇರ್ಪಡಿಸುತ್ತೀರಾ ಎಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್ .—ಮಾನ್ಯ ಅಧ್ಯಕ್ಷರೆ, ಸಾಮಾನ್ಯವಾಗಿ ಯಾವುದೇ ರಸ್ತೆಗಳು ನಗರ ಪ್ರದೇಶದಲ್ಲಿ ಒಳಗಡೆ ಹೋದಾಗ ಮತ್ತು ವಾಹನಗಳ ಸಂಖ್ಯೆ ಹೆಚ್ಚಾದಾಗ ನಾಗರೀಕರಿಗೆ ತೊಂದರೆ ಯಾಗುತ್ತದೆ ಎಂದು ಬೈಪಾಸ್ ರಸ್ತೆಗಳನ್ನು ಮಾಡುವಂಥ ಉದ್ದೇಶ. ೨೧ ಲಕ್ಷ ರೂಪಾಯಿಗಳು ಮಂಜೂರಾತಿ ಪಿಹಿ ೩೨ ಎಕರೆ ಭೂ ಸ್ವಾಧೀನಕ್ಕೆ ಆಗಬೇಕಾಗಿದೆ. ಅದರಲ್ಲಿ ಖುಷ್ಕಿ, ತರಿ ಮತ್ತು ಬಾಗಾಯ್ತು – ಹೀಗೆ ನಾನಾ ರೀತಿಯ ಬೆಲೆಯುಳ್ಳಂಥ ಜಮೀನುಗಳಿವೆ. ಈಗಾಗಲೇ ೨೪–೮–೧೯೮೭ ರಂದು ಭೂಸ್ವಾಧೀನ ಕ್ರಮದ ಅಧಿಸೂಚನೆಯನ್ನು ೨೨ ೬೧ ಎಕರೆಗೆ ಹೊರಡಿಸಿದೆ ಉಳಿದ ೭ ೭ ಎಕರೆಗೆ ಅಸಿಸ್ಟೆಂಟ್ ಕಮಿಷನರ್ ಭೂಸ್ವಾಧೀನದ ಬಗ್ಗೆ ಸರ್ಕಾರಕ್ಕೆ ಕಳುಹಿಸಿದ್ದಾರೆ. ಆದಾದಮೇಲೆ ಇಷ್ಟರಲ್ಲೇ ಕೊಡಿಸುತ್ತೇವೆ. ಇದಕ್ಕೆ ೨೧ ಲಕ್ಷ ರೂಪಾಯಿಗಳನ್ನು ತೆಗೆದಿಟ್ಟಿದೆ. ಇಷ್ಟರಲ್ಲೇ ಆಗಬಹುದು.

ಶ್ರೀ ವಿನಯ ಕುಮಾರ್ ಸೊರಕೆ.—ರಸ್ತೆಗೆ ಬೇಕಾದ ಭೂಮಿಯನ್ನು ಸರ್ಕಾರದ ಸ್ವಾಧೀನಕ್ಕೆ ಪಡೆದ ಮೇಲೆ, ಈ ಬೈಪಾಸ್ ರಸ್ತೆಯ ನಿರ್ಮಾಣದ ಕಾಮಗಾರಿಯನ್ನು ಹಣಕಾಸು ಲಭ್ಯತೆಗನುಗುಣವಾಗಿ ಕೈಗೊಳ್ಳಲಾಗುವುದು ಎಂದು ಉತ್ತರ ಕೊಟ್ಟಿದ್ದಾರೆ ಈ ಸದನದಲ್ಲಿ ಹಿಂದೆ ಪ್ರಸ್ತಾಪ ಮಾಡಿದಂಥ ಸಂದರ್ಭದಲ್ಲಿ ಲೋಕೋಪಯೋಗಿ ಮಂತ್ರಿಗಳಾಗಿದ್ದ ಶ್ರೀಮಾನ್ ದೇವೇಗೌಡರು, ಸಾರ್ವಜನಿಕರು ಜಾಗ ಕೊಡಲಿಕ್ಕೆ ತಾವೇ ಮುಂದೆ ಬಂದರೆ ಕೆಲಸಕಾರ್ಯ ಪ್ರಾರಂಭ ಮಾಡುತ್ತೇವೆ ಎಂದು ಭರವಸೆ ಕೊಟ್ಟಿದ್ದರು. ಆ ಭರವಸೆಯಿಂದಾಗಿ, ತಂಬ ಜನರು ಮುಂದೆ ಬಂದಿದ್ದಾರೆ, ಬೈಪಾಸ್ ರಸ್ತೆಗಾಗಿ ಜಾಗ ಬಿಟ್ಟು ಕೊಡುತ್ತೇವೆ ಎಂದು ಸಾರ್ವಜನಿಕರು ಮುಂದೆ ಬಂದಿದ್ದಾರೆ ಆದುದರಿಂದ ತಾವು ದುಡ್ಡನ್ನು ವಿನಿಯೋಗಿಸಿಕೊಂಡು ಈ ವರ್ಷವೇ ಏಕೆ ಮಾಡಬಾರದು ? ಹಲವಾರು ಸಂದರ್ಭದಲ್ಲಿ ಭೂಸ್ವಾಧೀನ ಮಾಡದೆ ಕೆಲಸ ಪ್ರಾರಂಭಿಸಿದಂಥ ಉದಾಹರಣೆಗಳಿವೆ. ಆ ದೃಷ್ಟಿಯಿಂದ ಈ ಕೆಲಸಕ್ಕೆ ಆದ್ಯತೆ ತೆಗೆದುಕೊಂಡು ಈ ರಸ್ತೆ ಕೆಲಸವನ್ನು ಏಕೆ ಪ್ರಾರಂಭಿಸಬಾರದು ಎಂದು ತಮ್ಮ ಮುಖಾಂತರ ಕೇಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಭೂಸ್ವಾಧೀನ ಕ್ರಮ ತೆಗೆದುಕೊಳ್ಳದೆ ಕಾರ್ಯಕ್ರಮ ಪ್ರಾರಂಭ ಮಾಡುವುದಕ್ಕೆ ತೊಂದರೆಯಾಗುತ್ತದೆ. ಆದರಲ್ಲಿ ೧೦ ಜನ ಒಪ್ಪಿಕೊಂಡರೆ ೧೧ನೇ ಯವರು ಒಪ್ಪಿಕೊಳ್ಳದೆ ಕೋರ್ಟಿಗೆ ಹೋದರೆ ಮತ್ತೆ ಕೆಲಸ ತಡವಾಗುತ್ತದೆ. ಆದು ಮತ್ತೆ ಭೂಸ್ವಾಧೀನಕ್ಕೆ ಬರುವ ಪ್ಪರ ಹೊತ್ತಿಗೆ ಎಷ್ಟಾಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ರಸ್ತೆ ಮಾಡುವುದಕ್ಕೆ ಜಮೀನು ಕೊಡುವುದಕ್ಕೆ ಜನ ಸಿದ್ಧರಾಗಿದ್ದಾರೆ ಎಂದು ಹೇಳಿದರು. ಭೂಸ್ವಾಧೀನ ಕ್ರಮದಲ್ಲಿ ನೇರವಾಗಿ ವಾಲೆಂಟರಿಯಾಗಿ ಅವರು ಹೋಗಿತ್ತು ಅಂದರೆ ಅವರಿಗೆ ಹಣ ಬೇಗ ದೊರಕುತ್ತದೆ, ಜಮೀನು ಕೊಟ್ಟ ಹಾಗೆ ಆಗುತ್ತದೆ, ಈಗಾಗಲೇ ಅಧಿಸೂಚನೆ ಹೊರಡಿಸಿದೆ. ಭೂ ಒಡೆಯರು ಹೀಗೆ ಮಾಡಿದರೆ ಆದಷ್ಟು ಬೇಗ ಜಮೀನನ್ನು ತೆಗೆದುಕೊಳ್ಳಲಿಕ್ಕೆ ಅನುಕೂಲವಾಗುತ್ತದೆ

ಶ್ರೀ ವಿನಯ ಕುಮಾರ್ ಸೊರಕೆ.—ಮಾನ್ಯ ಮಂತ್ರಿಗಳು ಉತ್ತರ ಹೇಳುವುದನ್ನು ನೋಡಿದರೆ ಜಾರಿಕೊಳ್ಳುವ ರೀತಿಯಲ್ಲಿ ಕಾಣುತ್ತಿದೆ. ಮಂಗಳೂರಿನಲ್ಲಿ ನ್ಯಾಷನಲ್ ಹೈವೇ ಮಾರ್ಗದ ಕೆಲಸವನ್ನು ಈಗಾಗಲೇ ಪೂರ್ತಿ ಮಾಡಿದ್ದೀರಿ. ಆದರಲ್ಲಿ ಭೂಸ್ವಾಧೀನ ಮಾಡಲಿಲ್ಲ. ಕೆಲಸ ಪ್ರಾರಂಭ ಮಾಡಿದ ಮೇಲೆ ಎಷ್ಟೋ ಜನರು ತಮ್ಮ ಭೂಮಿಯನ್ನು ಕೊಟ್ಟಿದ್ದಾರೆ. ಕಳೆದ ವರ್ಷ ಭೂಸ್ವಾಧೀನಕ್ಕೆ ಇಟ್ಟಂಥ ದುಡ್ಡು ೧೦ ಲಕ್ಷ, ಅದಕ್ಕೆ ಹಿಂದಿನ ವರ್ಷ ಭೂಸ್ವಾಧೀನಕ್ಕೆ ಇಟ್ಟಂಥ ದುಡ್ಡು ೧೨ ಲಕ್ಷ. ಈ ವರ್ಷ ೮ ಲಕ್ಷ ಇಟ್ಟಿದ್ದೀರಿ. ಇದರಿಂದ ಸರ್ಕಾರ ನಿರ್ಲಕ್ಷ್ಯ ಮಾಡುತ್ತಿದೆ ಎಂದು ಗೊತ್ತಾಗುತ್ತದೆ. ತಮಗೆ ಗೊತ್ತಿದೆ, ಅಲ್ಲಿ ದಿವಸಕ್ಕೆ ಒಂದೆರಡು ಅಪಘಾತವಾಗುತ್ತಿದೆ. ವಾಹನಗಳ ಓಡಾಟ ತಡವಾಗು

ತ್ತಿದೆ. ಕಳೆದ ೩ ವರ್ಷಗಳಿಂದ ಈ ಬೈಪಾಸ್ ರಸ್ತೆ ಮಾಡಿಕೊಡಬೇಕು ಎಂಬ ಬೇಡಿಕೆಯನ್ನು ಸಾರ್ವಜನಿಕರು ತಮ್ಮ ಎದುರಿನಲ್ಲಿ ಇಟ್ಟಿದ್ದಾರೆ. ಸರ್ಕಾರ ನಿರ್ಲಕ್ಷ್ಯ ಮಾಡುತ್ತಿದೆ. ಈ ರೀತಿ ನಿರ್ಲಕ್ಷ್ಯ ಮಾಡದೇ ಈ ವರ್ಷವೇ ಬೈಪಾಸ್ ರಸ್ತೆಯ ರಚನೆಗೆ ಅವಕಾಶ ಕಲ್ಪಿಸಿಕೊಡುತ್ತೀರಾ ಎಂದು ತಮ್ಮ ಮುಖಾಂತರ ಮಾನ್ಯ ಸಚಿವರನ್ನು ಕೇಳುತ್ತೇನೆ.

೩-೦೦ ಪಿ. ಎಂ.

ಶ್ರೀ ಎಂ. ಚಂದ್ರಶೇಖರ್.—೩೦.೨ ಎಕರೆಯ ಭೂಸ್ವಾಧೀನ ಕ್ರಮ ಪೂರ್ಣವಾಗಿ ಸರ್ಕಾರದ ವಶಕ್ಕೆ ದೊರೆತ ಹೊರತು ಕಾಮಗಾರಿ ಕೆಲಸವನ್ನು ಪ್ರಾರಂಭ ಮಾಡುವುದು ಕಷ್ಟವಾಗುತ್ತದೆ. ಅಧಿಸೂಚನೆಯನ್ನು ಹೊರಡಿಸಲಾಗಿದೆ. ವಾಲೆಂಟರಿಯಾಗಿ ಅವರು ಬಂದು ಡಿಕ್ಲರೇಷನ್ ಕೊಟ್ಟು ಒಪ್ಪಿಕೊಂಡರೆ ಬೇಗ ಕೆಲಸ ಆಗುತ್ತದೆ

ಅಧ್ಯಕ್ಷರು.—ಪ್ರಶ್ನೆ ಸಂಖ್ಯೆ : ೨೧೭೨, ಮಾನ್ಯ ಸದಸ್ಯರಿಗೆ ಮಾನ್ಯ ಮಂತ್ರಿಗಳು ದಿನಾಂಕ : ೧೩-೬-೮೮ರಂದು ಉತ್ತರವನ್ನು ಕೊಡುತ್ತಾರೆ.

(ಮುಂದೂಡಲಾದ ಪ್ರಶ್ನೆಗಳು)

(ಪ್ರಶ್ನೆ ಸಂಖ್ಯೆ : ೧೫೧೯) ಸದಸ್ಯರು ಗೈರು ಹಾಜರು.

(ಪ್ರಶ್ನೆ ಸಂಖ್ಯೆ : ೧೬೬೫) ಸದಸ್ಯರು ಗೈರು ಹಾಜರು.

(ಪ್ರಶ್ನೆ ಸಂಖ್ಯೆ : ೧೩೪೨)

ಶ್ರೀ ಎಚ್. ಎಸ್. ಕೌಜಲಗಿ.—ನಾನು ೨೨೨೧ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೆ, ಇದು ಮೈನರ್ ಇರಿಗೇಷನ್ ಮಂತ್ರಿಗಳ ಕಡೆಗೆ ಹೋಗಿದೆ ಈ ಪ್ರಶ್ನೆಯನ್ನು ಮತ್ತೊಂದು ದಿವಸ ಹಾಕಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಆಯಿತು ಈ ಪ್ರಶ್ನೆಯನ್ನು ಇನ್ನೊಂದು ದಿವಸಕ್ಕೆ ಹಾಕುತ್ತೇನೆ.

ಶ್ರೀ ಎಚ್. ಎಸ್. ಕೌಜಲಗಿ.—ಇದು ನೀರಾವರಿ ಕೆಲಸಕ್ಕೆ ಸಂಬಂಧಪಟ್ಟಿದ್ದು ತಾವು ದೊಡ್ಡವರು ಈ ಕೆಲಸವನ್ನು ಮಾಡದರೆ ಸಣ್ಣವರು ಬೇಡವೆಂದು ಹೇಳುತಾ?ರೆಯೇ ತಾವೆ ಹೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಪ್ರಶ್ನೆ ಮೈನರ್ ಇರಿಗೇಷನ್ ಮಂತ್ರಿಗಳ ಕಡೆ ಹೋಗಿದ್ದರಿಂದ ತಡವಾಗಿದೆ. ಮುಂದಿನ ಸಾರಿ ಅವರಿಗೆ ಸಮಾಧಾನವಾಗುವ ಹಾಗೆ ಉತ್ತರ ಕೊಡುತ್ತೇವೆ.

ಪ್ರಶ್ನೆ ಸಂಖ್ಯೆ : (೧೫೬೪) ಸದಸ್ಯರು ಗೈರು ಹಾಜರಿ.

ಅಧ್ಯಕ್ಷರು.—ಗೈರು ಹಾಜರಾಗಿದ್ದ ಸದಸ್ಯರ ಹೆಸರುಗಳನ್ನು ನಾನು ಮತ್ತೊಮ್ಮೆ ಕರೆಯುತ್ತೇನೆ. ಮಾನ್ಯ ಕೌಜಲಗಿಯವರೆ, ತಮ್ಮ ೨೨೨೧ನೇ ಪ್ರಶ್ನೆಯ ಬಗ್ಗೆ ಉತ್ತರವನ್ನು ಕೇಳಬಹುದು.

ಶ್ರೀ ಎಚ್. ಎಸ್. ಕೌಜಲಗಿ.—ಅಧ್ಯಕ್ಷರೆ ಇದರ ಬಗ್ಗೆ ಮಾನ್ಯ ಮಂತ್ರಿಗಳು ಅವ್ಹಣೆ ಕೊಡುತ್ತೇವೆಂದು ಹೇಳಿದರೆ ಆಯಿತು.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೆ, ನನ್ನ ಕಡೆ ಫೈಲು ಇಲ್ಲ. ಮುಂದಿನ ವಾರ ಅವರಿಗೆ ಸಮಾಧಾನವಾಗುವ ರೀತಿಯಲ್ಲಿ ಉತ್ತರವನ್ನು ಕೊಡುತ್ತೇನೆ.